# ಉಪವಿಭಾಗಾಧಿಕಾರಿಗಳ ನ್ಯಾಯಾಲಯ, ಪುತ್ತೂರು ಉಪವಿಭಾಗ , ಪುತ್ತೂರು

**ಪ್ರಕರಣದ ಸಂಖ್ಯೆ:ಎಡಿಸ್ ಆರ್.ಇ.ವಿ.ಎಸ್.ಆರ್: 208/14-15.**

**ದಿನಾಂಕ : 25-10-2016.**

**ಉಪಸ್ಥಿತರು : ಡಾ. ರಾಜೇಂದ್ರ ಕೆ.ವಿ ,ಭಾ.ಆ.ಸೇ.**

**ಉಪವಿಭಾಗಾಧಿಕಾರಿ**

**ಪುತ್ತೂರು ಉಪವಿಭಾಗ ಪುತ್ತೂರು**

| ಮೇಲ್ಮನವಿದಾರರು | | ಪ್ರತಿವಾದಿಯವರು |
|---|---|---|
| ಶ್ರೀ ವೇಣುಗೋಪಾಲ ಭಟ್, | | ತಹಶೀಲ್ದಾರರು, |
| ಬಿನ್ ರಾಮ ಭಟ್, | -ಮತ್ತು- | ಬೆಳ್ತಂಗಡಿ ತಾಲೂಕು ದ.ಕ |
| ಕಲ್ಲುಕಡ್ತಿಮಾರು ಮನೆ, | | |
| ಉಜಿರೆ ಗ್ರಾಮ ಮತ್ತು ಅಂಚೆ, | | |
| ಬೆಳ್ತಂಗಡಿ ತಾಲೂಕು.ದ.ಕ | | |
| ( ನ್ಯಾಯವಾದಿ ಶ್ರೀ ಎಮ್ ಬಿ ಸಂಪಿಗೆತ್ತಾಯ) | | |

ಪ್ರಸ್ತಾವನೆ

ಮೇಲ್ಮನವಿದಾರರು ಈ ಮೇಲ್ಮನವಿಯನ್ನು ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ ಕಲಂ 49 ರ ಮೇರೆಗೆ ಬೆಳ್ತಂಗಡಿ ತಾಲೂಕು ಉಜಿರೆ ಗ್ರಾಮದ ಎನ್.ಸಿ.ಆರ್.ಸಿ.ಆರ್ 190/98-99 ರಂತೆ ತಹಶೀಲ್ದಾರರು ಕೃತಾವಳಿ ಇಲ್ಲ ಎಂದು ನೀಡಿರುವ ಹಿಂಬರಹ ಪ್ರಶ್ನಿಸಿ ಈ ಮೇಲ್ಮನವಿಯನ್ನು ಸಲ್ಲಿಸಿರುವುದಾಗಿದೆ.

ಮೇಲ್ಮನವಿದಾರರು ಈ ಮೇಲ್ಮನವಿಯಲ್ಲಿ ಬೆಳ್ತಂಗಡಿ ತಾಲೂಕು ಉಜಿರೆ ಗ್ರಾಮದ ಸ.ನಂ. 104/1 ಮತ್ತು 128 ರಲ್ಲಿ 2.50 ಎಕ್ರೆ ಜಮೀನನ್ನು ಕಳೆದ ಸುಮಾರು 17 ವರ್ಷಗಳಿಂದ ಗೇರು ಕೃಷಿ ಮಾಡಿಕೊಂಡು ಸ್ವಾಧೀನ ಹೊಂದಿರುತ್ತಾರೆ. ಈ ಜಮೀನಿನಲ್ಲಿ ಬಾವಿ ಹಾಗೂ ಸುತ್ತಲೂ ಬೇಲಿ ಇರುತ್ತದೆ. ಅಲ್ಲದೆ ಆಕ್ರಮಿತ ಜಮೀನಿನಲ್ಲಿ ಅನಾನಸು, ಶುಂಠಿ, ತರಕಾರಿಗಳನ್ನು ಬೆಳೆಸುತ್ತಿರುವರು. ಈ ಆಕ್ರಮಣ ಜಮೀನನ್ನು ಸಕ್ರಮೀಕರಣಕ್ಕೆ ಸರಕಾರದಿಂದ ನಿರ್ದೇಶನ ಬಂದಂತೆ ನಮೂನೆ 53 ರಲ್ಲಿ ಅರ್ಜಿ ಸಲ್ಲಿಸಿದ್ದು, ಸದ್ರಿ ಅರ್ಜಿಯನ್ನು .ಎನ್.ಸಿ.ಆರ್.ಸಿ.ಆರ್ 190/98-90 ಎಂದು ದಾಖಲಿಸಲಾಗಿದೆ. ಸದ್ರಿ ಸಕ್ರಮೀಕರಣದ ಬಗ್ಗೆ ನಿಯಮಾನುಸಾರ ಪರಿಶೀಲನೆ ಮಾಡದೆ ಕೃತಾವಳಿ ಇಲ್ಲ ಎಂಬುವುದಾಗಿ ಅರ್ಜಿಯನ್ನು ತಿರಸ್ಕರಿಸಿ ಹಿಂಬರಹ ನೀಡಿರುವುದರಿಂದ ಬಾಧಿತರಾದ ಮೇಲ್ಮನವಿದಾರರು ಈ ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸಿರುವುದಾಗಿದೆ. ವಿಳಂಬ ವಿನಾಯಿತಿ ಬಗ್ಗೆ ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ ಕಲಂ 5 ರ ಮೇರೆಗೆ ಅರ್ಜಿ ಸಲ್ಲಿಸಿರುತ್ತಾರೆ.

ಸದ್ರಿ ಮೇಲ್ಮನವಿಯನ್ನು ಪರೀಶೀಲಿಸಿ ವಿಚಾರಣೆಗೆ ಒಪ್ಪಿ ಮೇಲ್ಮನವಿದಾರರಿಗೆ ಮತ್ತು ಪ್ರತಿವಾದಿಯವರಿಗೆ ವಿಚಾರಣೆಗೆ ದಿನಾಂಕ : 27-01-2015 ರಂದು ಹಾಜರಾಗುವಂತೆ ನೋಟೀಸು ನೀಡಿ ಸಕಾರಣಗಳಿಗಾಗಿ ಮುಂದೂಡಲಾಗಿ ಅಂತಿಮವಾಗಿ ದಿನಾಂಕ : 22-03-2016 ರಂದು ವಿಚಾರಣೆಗೆ ಕೈಗೆತ್ತಿಕೊಂಡು ಆದೇಶಕ್ಕೆ ಕಾಯ್ದಿರಿಸಲಾಯಿತು.

ಸದ್ರಿ ಪ್ರಕರಣದ ವಿಚಾರಣೆ ಸಮಯ ಪ್ರತಿವಾದಿಯವರು ಹಾಜರಾಗಿರುವುದಿಲ್ಲ. ಮೇಲ್ಮನವಿಯ ಪರ ನ್ಯಾಯವಾದಿಯವರು ಹಾಜರಾಗಿ ಮೇಲ್ಮನವಿಯ ಅಂಶವನ್ನೇ ಪುನರುಚ್ಚರಿಸುತ್ತಾ ತಹಶೀಲ್ದಾರರು ನೀಡಿದ ಹಿಂಬರಹ ಎನ್.ಸಿ.ಆರ್.ಸಿ.ಆರ್ 190/98-99 (ಉಜಿರೆ) ದಿನಾಂಕ : 19-10-2004 ನ್ನು ರದ್ದುಗೊಳಿಸಿ, ಆಕ್ರಮಿತ ಜಮೀನನ್ನು ಮೇಲ್ಮನವಿದಾರರಿಗೆ ಮಂಜೂರುಗೊಳಿಸಲು ನಿರ್ದೇಶನ ನೀಡುವಂತೆ ಕೋರಿ ವಾದ ಮಂಡಿಸುತ್ತಾರೆ

ಮೇಲ್ಮನವಿಯ ಎಲ್ಲಾ ಅಂಶಗಳನ್ನು ದಾಖಲೆಗಳನ್ನು ಪರಿಶೀಲಿಸಿದಾಗ ಪ್ರತಿವಾದಿ ತಹಶೀಲ್ದಾರರು ನಿಯಮಾನುಸಾರ ಅಕ್ರಮ-ಸಕ್ರಮ ಅರ್ಜಿಯ ಕುರಿತು ಪರಿಶೀಲಿಸದೆ, ಸಮಿತಿಗೆ ಮಂಡಿಸದೆ ಅರ್ಜಿಯನ್ನು ವಿಲೇಗೊಳಿಸಿರುವುದನ್ನು ಮನಗಂಡು ಈ ಕೆಳಗಿನಂತೆ ಆದೇಶಿಸಿದೆ.

## ಆದೇಶ.

ಮೇಲ್ಮನವಿಯನ್ನು ಪುರಸ್ಕರಿಸಿದೆ.

ಎನ್.ಸಿ.ಆರ್.ಸಿ.ಆರ್ 190/98-99 ರಂತೆ ಬೆಳ್ತಂಗಡಿ ತಹಶೀಲ್ದಾರರು ನೀಡಿದ ಹಿಂಬರಹವನ್ನು ರದ್ದುಪಡಿಸಿದೆ.

ಮೇಲ್ಮನವಿದಾರರು ಉಜಿರೆ ಗ್ರಾಮದಲ್ಲಿನ ಆ

ಕ್ರಮಣ ಜಮೀನು ಮಂಜೂರಾತಿಗಾಗಿ ಸಲ್ಲಿಸಿದ ಎನ್.ಸಿ.ಆರ್.ಸಿ.ಆರ್ 190/98-99 ನೇ ಅರ್ಜಿಯ ಕುರಿತು ಮರುಪರಿಶೀಲನೆ ನಡೆಸಿ ನಿಯಮಾನುಸಾರ ಸೂಕ್ತ ಕ್ರಮ ಜರಗಿಸಲು ಬೆಳ್ತಂಗಡಿ ತಹಶೀಲ್ದಾರರಿಗೆ ಆದೇಶಿಸಿದೆ.

ಈ ಆದೇಶವನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ಕೊಟ್ಟು ಬೆರಳಚ್ಚು ಪಡಿಸಿ, ಪರಿಷ್ಕರಿಸಿ ಈ ದಿನ ದಿನಾಂಕ: 25-10-2016 ರಂದು ಬಹಿರಂಗ ನ್ಯಾಯಾಲಯದಲ್ಲಿ ಉದ್ಘೋಷಿಸಲಾಯಿತು.

Rajendra

ಡಾ.ರಾಜೇಂದ್ರ ಕೆ.ವಿ, ಐ.ಎ.ಎಸ್

ಸಹಾಯಕ ಆಯುಕ್ತರು,

ಪುತ್ತೂರು ಉಪವಿಭಾಗ, ಪುತ್ತೂರು ದ.ಕ

ಪ್ರತಿ: ಮೇಲ್ಮನವಿದಾರರ ಪರ ನ್ಯಾಯವಾದಿ ಶ್ರೀ ಎಮ್ ಬಿ ಸಂಪಿಗೆತ್ತಾಯ ಇವರ ಮುಖಾಂತರ ಜ್ಯಾರಿ.

ಪ್ರತಿ: ತಹಶೀಲ್ದಾರರು ಬೆಳ್ತಂಗಡಿ ತಾಲೂಕು ಇವರಿಗೆ ಸೂಕ್ತ ಕ್ರಮಕ್ಕಾಗಿ.